ಕಡೂರು ಡಿಸ್ಟ್ರಿಕ್ಟು.

ತಾರೀಖು 31ನೇ ಮೇ 1887.

ಕಡೂರು ಡಿಸ್ಟ್ರಿಕ್ಟು ತರೀಕೆರೆ ತಾಲ್ಲೂಕು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಇದರ ಕೆಳಗೆ ನಮೂದಿಸಿರುವ ಬೇವಾರಸ್ ದಸ್ತಾವೇಜನ್ನು ಕ್ರಮ ಪ್ರಕಾರ ವಾರಸ್‌ದಾರ್‌ರಾಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕರಾಗಲೀ ಈ ತಾರೀಖು ಲಾಗಾಯತು ಎಂದು ತಿಂಗಳೊಳಗಾಗಿ ಹಾಜರಾಗಿ ವಾಪಸ್ ಪಡೆಯಬೇಕು, ತಪ್ಪಿದಲ್ಲಿ ರಿಜಿಸ್ಟ್ರೇಷನ್ ಆಕ್ಟ್ 85ನೇ ಸೆಕ್ಷನ್ ಮೇರೆ ನಾಶಪಡಿಸಲ್ಪಡುತ್ತೆ.

ದಸ್ತಾವೇಜಿನ ನಂಬರ್ ಮತ್ತು ಸಬ್ ರಿಜಿಸ್ಟ್ರಾರ್ ಆಫೀಸ್ ಹೆಸರು.	ದಸ್ತಾವೇಜು ಬರದು ಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಬರಿಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ರಿಜಿಸ್ಟ್ರೇಷನ್ ಬಗ್ಗೆ ಹಾಜರಾದ್ದಿದ ತಾರೀಖು.	ರಿಜಿಸ್ಟ್ರಾದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
Iನೇ ಬುಕ್ಕು ನಂಬರ್ 19 1885—86 ತರೀಕೆರೆತಾಲ್ಲೂಕು ಸಬ್ ರಿಜಿಸ್ಟ್ರಾರ್ ಆಫೀಸ್	ತರೀಕೆರೆ ತಾಲ್ಲೂಕು ಕಸಬಾ ಹಾದೀಕೆರೆಯಲ್ಲಿರುವ ಸೈದ್ ಸಾಬರ ಮಗ ಸೈದ್ ಅಬ್ಬಾಸಾಬ್	ತರೀಕೆರೆ ತಾಲ್ಲೂಕು ಕಸಬಾ ಹಾದೀಕೆರೆಯಲ್ಲಿರುವ ಸೈದ್ ಸಾಬರ ಮಗ ಸೈದ್ ಅಬ್ಬಾಸಾಬನ ಹೆಂಡತಿ ಜಹಬಾರಾಬಿ	30ನೇ ಏಪ್ರೆಲ್ 1885ನೇ ಇಸವಿ	30ನೇ ಏಪ್ರೆಲ್ 1885ನೇ ಸವಿ	200 ರೂಪಾಯಿಗಳಿಗೆ ಹಾದೀಕೆರೆ ಗ್ರಾಮದ ಸರ್ವೆ ನಂ. 53-5 ಮತ್ತು ಈ ಗ್ರಾಮಕ್ಕೆ ಶೇರಿದ ಮಲ್ಲೇನಹಳ್ಳಿ ಸರ್ವೆ ನಂ. 5ನೇ ಪೈಕೀ ಗದ್ದೇ ಸಹ ಕುದ್ದ ಕ್ರಯಕ್ಕೆ ಕೊಟ್ಟರುವದಾಗಿ.
Iನೇ ಬುಕ್ಕು ನಂಬರ್ 38 1885—86 ತರೀಕೆರೆತಾಲ್ಲೂಕು ಸಬ್ ರಿಜಿಸ್ಟ್ರಾರ್ ಆಫೀಸ್	ತರೀಕೆರೆ ತಾಲ್ಲೂಕು ಅಜ್ಜಂಪುರವಲ್ಲಿಇರುವ ಅಂತರಗಟ್ಟೆ ನಾಡಿಗ ಲಿಂಗಪ್ಪನವರ ಮಗ ಚಿಂಕರಪ್ಪ ಯಾನೆ ಪುಟ್ಟರಾಮಣ್ಣ	ಕಡೂರು ತಾಲ್ಲೂಕು ಚಿಕ್ಕ ನಲ್ಲೂರಲ್ಲಿರುವ ಕೃಷ್ಣಪ್ಪನವರ ಮಗ ಸಂಣಪ್ಪ	23ನೇ ಮೇ 1885ನೇ ಇ	23ನೇ ಮೇ 1885ನೇ ಇಸವಿ	200 ರೂಪಾಯಿಗಳಿಗೆ ತರೀಕೆರೆ ತಾಲ್ಲೂಕು ಬುಕ್ಕಾಂಬುಧಿ ಗ್ರಾಮದಲ್ಲಿರುವ 31ನೇ ನಂ. ಹಂಚಿನ ಮನೆ ಇದಕ್ಕೆ ಶೇರಿದ ಹಿತ್ತಲು ಅಂಗಳ ಸಹ ಮತ್ತು ಕಡೂರು ತಾಲ್ಲೂಕು ಚಿಕ್ಕನಲ್ಲೂರು ಕಸಬಾಗ್ರಾಮವಲ್ಲಿರುವ ನಂ. 81—82ನೇ ಹಂಚಿನ ಮನೆ ಇದಕ್ಕೆ ಶೇರಿದ ನಿವೇಶನ ಸಹ ಮತ್ತು ಯಿವೇ ಗ್ರಾಮದ ಬಗರ್ ನಂಬರ್ ಹುಲ್ಲಿನ ಮನೆ ಈ ಮೂರು ಸೊತ್ತುಗಳನ್ನು ಕ್ರಯಕ್ಕೆ ಕೊಟ್ಟರುವದಾಗಿ ವಗೈರೆ.

ಜೆ. ಯೆ. ಕ್ಯಾಂಪ್‌ಬೆಲ್, ಕರ್ನಲ್,
ಆ|| ರಿಜಿಸ್ಟ್ರಾರ್.

ತಾರೀಖು 20ನೇ ಮೇ 1887.

ಕಡೂರು ಡಿಸ್ಟ್ರಿಕ್ಟು ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್‌ದಾರರುಗಳು, ಸ೯ 1887ನೇ ಇಸವಿ ಮಾರ್ಚಿ ಆಖೈರ್ ವರಿಗಿನ ಬಡ್ಡೀ ದಾಖಲ್ ಬಗ್ಗೆ ತಮ್ಮ ಪ್ಯಾಸ್ ಬುಕ್ಕುಗಳನ್ನು ಬಹಳ ಕ್ಷಿಪ್ರವಾಗಿ ಡಿಸ್ಟ್ರಿಕ್ಟು ಖಜಾನೆಗೆ ಹಾಜರ್ಮಾಡಬೇಕೆಂದು ಇದರಿಂದ ಕೇಳಲ್ಪಟ್ಟಿರುತ್ತಾರೆ.

ಟಿ. ರಾಘವೇಂದ್ರರಾವ್,
ಟ್ರೆಜರಿ ಆಫೀಸರ್.

ತಾರೀಖು 4ನೇ ಜೂ೯ 1887.

ಇದರಿಂದ ಸರ್ವರಿಗೂ ತಿಳಿಯಪಡಿಸುವದೇನಂದರೆ, ಈ ಡಿಸ್ಟ್ರಿಕ್ಟಿನಲ್ಲಿನ ಇದರಡೀಕಂಡ ಕಾಫೀ ಜಮೀನುಗಳ ಬಾಬತು ಬಾಯು ತಹಲ್ ಪಾವತೀ ಮಾಡದೇ ಯಿರುವದ್ದರಿಂದ ಸದರೀ ಜಮೀನುಗಳು ಸ೯ 1887ನೇ ಇಸವಿ ಜುಲೈ 11ನೇ ಸೋಮವಾರ ಮಧ್ಯಾಹ್ನ ಯಿಷ್ಟರಲ್ಲಿ ಸಬ್ ತಾಲ್ಲೂಕು ಕಚೇರಿಯಲ್ಲಿ ಬಹಿರಂಗವಾದ ಹರಾಜಿನಲ್ಲಿ ಕಂದಾಯದ ಬಾಕೀ ವಸೂಲಿ ಬಗ್ಯಾಗಿ ವಿಕ್ರಯಿಸಲ್ಪಡುವವು:—